# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ. ನಂ.1258-2016** **ಡಿ .ಡಬ್ಲುಃ 2**

| | |
|---|---|
| ಸಾಕ್ಷಿದಾರರ ಹೆಸರು | ರುಕ್ಕಮ್ಮ |
| ತಂದೆ/ ಗಂಡನ ಹೆಸರು | ಲೇ.ಮಹದೇವು |
| ವಯಸ್ಸು | 58 ವರ್ಷ |
| ಉದ್ಯೋಗ | ಕೂಲಿ |
| ವಾಸ್ತವ್ಯ | ಗೊದ್ದನಪುರಹುಂಡಿ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 19-02-2024.** |

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಕೆ.ಎಸ್.ಕೆ ವಕೀಲರಿಂದಃ**

ಪಿರ್ಯಾದಿದಾರರು ನನ್ನ ಮೈದುನನಾಗಬೇಕು. ಪಿರ್ಯಾದಿದಾರರು ನನ್ನ ಮಗನಿಗೆ ಗಾಡಿಯನ್ನು ಕೊಡಿಸುವುದಾಗಿ ಹೇಳಿ ನನ್ನ ಮಗನಿಂದ ಚೆಕ್‌ಬುಕ್ ಅನ್ನು ಪಡೆದುಕೊಂಡಿದ್ದರು, ಆದರೆ ಪಿರ್ಯಾದಿದಾರರು ನನ್ನ ಮಗನಿಗೆ ಗಾಡಿ ಕೊಡಿಸಲಿಲ್ಲ. ಪೊಲೀಸರು ನನ್ನ ಮಗನನ್ನಾ ಬಂಧಿಸಿ ಕರೆದುಕೊಂಡು ಬಂದಾಗಲೇ ಪಿರ್ಯಾದಿದಾರರು ನನ್ನ ಮಗನ ವಿರುದ್ಧ ಕೇಸು ದಾಖಲು ಮಾಡಿರುವ ವಿಚಾರ ನನಗೆ ಗೊತ್ತಾಯಿತು.

2. ಚೆಕ್ ಬುಕ್ ಅನ್ನು ನನ್ನ ಮಗ 2007 ರಲ್ಲಿ ತೆಗೆದುಕೊಂಡಿದ್ದು. ನನ್ನ ಮಗನಿಗೆ 2009 ರಲ್ಲಿ ಮದುವೆಯಾಗಿರುತ್ತದೆ. ಪಿರ್ಯಾದಿ ನಮ್ಮ ಸಂಬಂಧಿ ಆಗಿದ್ದರಿಂದ ಅವರ ಹತ್ತಿರಾನೇ ನನ್ನ ಮಗ ಚೆಕ್ ಬುಕ್ ಬಿಟ್ಟಿದ್ದ. ನನ್ನ ಮಗ ಪಿರ್ಯಾದಿದಾರರಿಂದ ಯಾವುದೇ ಸಾಲ ಪಡೆದುಕೊಂಡು ಮನೆ ಕಟ್ಟಿರುವುದಿಲ್ಲ. ಪಿರ್ಯಾದಿದಾರರ ಪತ್ನಿಯವರು ಅವರ ತವರು ಮನೆಯವರಾದ ಸಿದ್ಧೇಗೌಡ,

ಚಿಕ್ಕತಾಯಮ್ಮ ಮತ್ತು ಕೃಷ್ಣೇಗೌಡ ರವರುಗಳ ವಿರುದ್ಧ ಭಾಗಕ್ಕಾಗಿ ಕೇಸು ದಾಖಲು ಮಾಡಿದ್ದು, ಆ ಸಮಯ ನಮ್ಮನ್ನು ಸಾಕ್ಷಿಯಾಗಿ ಬರಲು ಕೇಳಿಕೊಂಡಿದ್ದು, ಅದರೆ ನಾವುಗಳು ಸಾಕ್ಷಿಯಾಗಿ ಹೋಗಲು ಒಪ್ಪದೇ ಇದ್ದುದ್ದರಿಂದ ನನ್ನ ಮಗನ ವಿರುದ್ಧ ಈ ಕೇಸನ್ನು ದಾಖಲು ಮಾಡಿರುತ್ತಾರೆ. ಆದುದರಿಂದ ಪಿರ್ಯಾದಿದಾರರು ಸಲ್ಲಿಸಿರುವ ಈ ಪಿರ್ಯಾದನ್ನು ವಜಾಕರಿಸಬೇಕಾಗಿ ನ್ಯಾಯಾಲಯದಲ್ಲಿ ಪ್ರಾರ್ಥನೆ.

(ಪಾಟೀ ಸವಾಲಿಗೆ ಪಿರ್ಯಾದಿದಾರರ ಪರ ವಕೀಲರು ಸಮಯಾವಕಾಶವನ್ನು ಕೇಳಿರುವುದರಿಂದ ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**